**ಸಿ. ಸಿ. ನಂ. 8169/2024**

**ಪಿ ಡಬ್ಲ್ಯೂಃ 1**

**ಸಾಕ್ಷಿಯು ದಿನಾಂಕಃ** 11-11-2025 **ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಪಾಟಿ ಸವಾಲುಃ ಆರೋಪಿ ಪರ ಶ್ರೀ ಕೆ ವಾಯ್., ವಕೀಲರಿಂದ</u>**

ನಾನು ಮದರಸಾದಲ್ಲಿ ಶಿಕ್ಷಣ ಪಡೆದಿರುತ್ತೇನೆ. ನಾನು ಯಾವುದೇ ಶಾಲೆಯಲ್ಲಿ ಶಿಕ್ಷಣ ಪಡೆದಿರುವುದಿಲ್ಲ. ಆರೋಪಿ ನನಗೆ ಸಂಬಂಧದಲ್ಲಿ ತಮ್ಮನಾಗಬೇಕು. ನಾನು **2023** ರಿಂದ **2024** ರ ಅವಧಿಯಲ್ಲಿ ಪಾಲುದಾರಿಕೆಯಲ್ಲಿ ಹೋಟೆಲ್ ನಡೆಸುತ್ತಿದ್ದೆ. ನಾನು ಹೋಟೆಲ್ ನಡೆಸಲು ಯಾವುದೇ ಕೋರ್ಸ ಮಾಡಿಲ್ಲ ಮತ್ತು ಹೋಟೆಲ್ ನಡೆಸಿದ ಅನುಭವ ಹೊಂದಿರಲಿಲ್ಲ ಅಂದರೆ ಸರಿ. ನನಗೆ ಹೋಟೆಲ್ ನಲ್ಲಿ ತಿಂಡಿ ಪದಾರ್ಥಗಳನ್ನು ತಯಾರಿಸಲು ಸಹ ಬರುವುದಿಲ್ಲ ಅಂದರೆ ಸರಿ. ನಾನು **2023** ರಲ್ಲಿ ಹೋಟೆಲ್ ನಡೆಸುವುದಕ್ಕೂ ಮೊದಲು ಕೋಕ್ ಅಥವಾ ಕಲ್ಲಿದ್ದಲು ಕ್ರಶರ್ ನಲ್ಲಿ ಕೆಲಸ ಮಾಡುತ್ತಿದ್ದೆ. ನನಗೆ ಸದರಿ ಕ್ರಶರ್ ನಲ್ಲಿ ಮಾಸಿಕ ರೂ. **15,000/-** ಸಂಬಳ ಇತ್ತು. ಸದರಿ ರೂ. **15,000/-** ಗಳ ಆದಾಯ ಹೊರತು ಪಡಿಸಿ ಬೇರೆ ಆದಾಯ ಇರಲಿಲ್ಲ ಅಂದರೆ ಸರಿ.

**2023** ರಲ್ಲಿ ಹೋಟೆಲ್ ಪ್ರಾರಂಭವಾದಾಗ ಆರೋಪಿ ನನ್ನ ಬಳಿ ಕೆಲಸಕ್ಕೆ ಸೇರಿದ್ದ ಅಂದರೆ ಸರಿ. ನಾನು ಆರೋಪಿಗೆ ಅಣ್ಣನಾಗಿದ್ದರಿಂದ ಹೋಟೆಲ್ ವ್ಯವಸ್ಥಾಪನೆಯನ್ನು ನಾನೇ ನೋಡಿಕೊಳ್ಳುತ್ತಿದ್ದೆ ಅಂದರೆ ಸರಿ. ಹೋಟೆಲ್ ನಲ್ಲಿ ವ್ಯವಸ್ಥಾಪಕ ಆಗಿ ಕೆಲಸ ಮಾಡುವುದರಿಂದ ನನಗೆ ಮಾಸಿಕ ಸಂಬಳ ಕೊಡುತ್ತಿದ್ದರು ಅಂದರೆ ಸರಿಯಲ್ಲ. **2023-24** ರಲ್ಲಿ ನನಗೆ ಮಾಸಿಕ ಆದಾಯ ಏನು ಇರಲಿಲ್ಲ. ನನ್ನ ಬಳಿ ಬಿ ಪಿ ಎಲ್ ಕಾರ್ಡ ಇರುತ್ತದೆ ಅಂದರೆ ಸರಿ. ಕಡುಬಡವರಿಗೆ ಬಿ ಪಿ ಎಲ್ ಕಾರ್ಡ ವಿತರಿಸಲಾಗುತ್ತದೆ ಅಂದರೆ ಸರಿ.

ಸಾಮಾನ್ಯವಾಗಿ ಯಾವುದೇ ವ್ಯವಹಾರ ಆದಾಗ ಆ ಬಗ್ಗೆ ಕರಾರು ಪತ್ರ ಬರೆದುಕೊಳ್ಳಲಾಗುತ್ತದೆ ಅಂದರೆ ಸರಿ. ಆರೋಪಿಯೊಂದಿಗೆ ಹೋಟೆಲ್ ಗುತ್ತಿಗೆ ಕೆಲಸದ ವ್ಯವಹಾರ ಆದ ಬಗ್ಗೆ ಕರಾರು ಪತ್ರ ಮಾಡಿಕೊಂಡಿರುತ್ತೇನೆ. ಸದರಿ ಕರಾರು ಪತ್ರವನ್ನು ಹಾಜರುಪಡಿಸಲು ತೊಂದರೆ ಇಲ್ಲ. ಸದರಿ ಕರಾರು ಪತ್ರ ನನ್ನ ಬಳಿ ಇರುತ್ತದೆ. ಹೋಟೆಲ್ ಪ್ರಾರಂಭಿಸುವುದಕ್ಕೂ ಮೊದಲು ಆರೋಪಿಗೆ ನಾನು ರೂ. **5,30,000/-** ಹಣ ಕೊಟ್ಟಿದ್ದೆ. ಸದರಿ ಹಣವನ್ನು ಆರ್ ಟಿ ಜಿ ಎಸ್ ಮತ್ತು ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ನನ್ನ ದೂರಿನಲ್ಲಿ ಮತ್ತು ನೋಟಿಸ್ ನಲ್ಲಿ ಏನೆಲ್ಲಾ ಬರೆದಿದೆ ಎಂದು ನನಗೆ ಮಾಹಿತಿ ಇಲ್ಲ ಅಂದರೆ ಸರಿ.

ನಾನು ಆರ್ ಟಿ ಜಿ ಎಸ್ ಮೂಲಕ ಆರೋಪಿಗೆ ಕೊಟ್ಟಿರುತ್ತೇನೆ ಎನ್ನಲಾದ ಹಣಕ್ಕೆ ಸಂಬಂಧಿಸಿದ ಬ್ಯಾಂಕ್ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ. ಹೋಟೆಲ್ ಪ್ರಾರಂಭಿಸಲು ರೂ. **5,30,000/-** ಗಳನ್ನು ಮನೆಯಲ್ಲಿದ್ದ ಬಂಗಾರದ ಆಭರಣಗಳನ್ನು ಒತ್ತೆ ಇಟ್ಟು ತಂದಿರುತ್ತೇನೆ. ಸದರಿ ಬಂಗಾರದ ಆಭರಣಗಳನ್ನು ಯಾವ ಬ್ಯಾಂಕ್ ನಲ್ಲಿ ಅಥವಾ ಸಂಸ್ಥೆಯಲ್ಲಿ ಒತ್ತೆ ಇಟ್ಟಿರುತ್ತೇನೋ ಅಲ್ಲಿಂದ ದಾಖಲೆಯನ್ನು ಪಡೆದಿರುತ್ತೇನೆ. ಸದರಿ ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ. ಹೋಟೆಲ್ ನಡೆಸಲು ಸಂಬಂಧಪಟ್ಟ ಇಲಾಖೆಯಿಂದ ಪರವಾನಗಿ ಪಡೆದಿರುವುದಿಲ್ಲ. ಯಾವ ಹೆಸರಿನಲ್ಲಿ ಸದರಿ ಹೋಟೆಲ್ ನಡೆಸಿರುತ್ತೇನೆ ಎಂದು ಹೇಳಲು ಆಗುವುದಿಲ್ಲ ಅಂದರೆ ಸರಿ.

ನಿಪಿಃ 1 ರಲ್ಲಿರುವ ಎಲ್ಲಾ ಬರಹಗಳನ್ನು ಮತ್ತು ಸಹಿಯನ್ನು ಆರೋಪಿ ಬರೆದಿಲ್ಲ ಅಂದರೆ ಸರಿಯಲ್ಲ. ನಾನು ಆರೋಪಿಗೆ ಯಾವುದೇ ನೋಟಿಸ್ ನೀಡಿರಲಿಲ್ಲ ಅಂದರೆ ಸರಿಯಲ್ಲ. ನಿಪಿಃ 5 ರಲ್ಲಿನ ಸಹಿ ಆರೋಪಿಯದ್ದಲ್ಲ ಅಂದರೆ ಸರಿಯಲ್ಲ. ಆರೋಪಿ ತನ್ನ ಹೋಟೆಲ್ ನಲ್ಲಿ ವ್ಯವಸ್ಥಾಪಕನಾಗಿ ಕೆಲಸ ಮಾಡಲು ನನ್ನನ್ನು ಇಟ್ಟುಕೊಂಡು ಮಾಸಿಕ ಸಂಬಳ ಕೊಡುತ್ತಿದ್ದ ಅಂದರೆ ಸರಿಯಲ್ಲ. ಹೋಟೆಲ್ ನ ಅಕೌಂಟ್ಸ ಪುಸ್ತಕಗಳನ್ನು ನಾನೇ ನಿರ್ವಹಣೆ ಮಾಡುತ್ತಿದ್ದೆ ಅಂದರೆ ಸರಿ. ಹೋಟೆಲ್ ಸರಿಯಾಗಿ ನಡೆಯದೇ ಮುಂಚೆ ಮುಚ್ಚಲಾಯಿತು ಅಂದರೆ ಸರಿ. ನನ್ನ ತಪ್ಪಿನಿಂದಲೇ ಸದರಿ ಹೋಟೆಲ್ ನ ನಿರ್ವಹಣೆ ಸರಿಯಾಗಿ ಆಗದೇ ಆರೋಪಿಗೆ ಸಾಕಷ್ಟು ನಷ್ಟ ಆಗಿದ್ದರಿಂದ ಹೋಟೆಲ್ ಮುಚ್ಚ ಬೇಕಾಯಿತು ಅಂದರೆ ಸರಿಯಲ್ಲ.

ಆರೋಪಿ ನನಗೆ 2 ಕರಾರು ಪತ್ರಗಳನ್ನು ಬರೆದುಕೊಟ್ಟಿರುತ್ತಾರೆ. ಸದರಿ ಕರಾರು ಪತ್ರಗಳು ನನ್ನ ಬಳಿ ಇರುತ್ತವೆ, ಅವುಗಳನ್ನು ಹಾಜರುಪಡಿಸಬಲ್ಲೆ. ನಾನು ಆರೋಪಿಯ ಬಳಿ ಸಂಬಳಕ್ಕೆ ಕೆಲಸಕ್ಕೆ ಮಾಡುತ್ತಿದ್ದ ನೌಕರ ಆಗಿದ್ದೆ ಮತ್ತು ಗುತ್ತಿಗೆ ಆಧಾರದ ಮೇಲೆ ಯಾವುದೇ ವ್ಯವಹಾರ ಆಗಿಲ್ಲ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸಂಬಳವೂ ಇರಲಿಲ್ಲ, ಗುತ್ತಿಗೆ ಆಧಾರದ ಮೇಲೆ ಕೆಲಸವೂ ಇರಲಿಲ್ಲ ಎಂದು ನುಡಿಯುತ್ತಾರೆ. ನನಗೆ 2 ತಿಂಗಳ ಸಂಬಳ ಕೊಡುವುದು ಬಾಕಿ ಇದ್ದದ್ದರಿಂದ, ನನ್ನನ್ನು ಕೆಲಸದಿಂದ ತೆಗೆದಾಗ ನಾನು ಆರೋಪಿಯು ಅಕೌಂಟ್ಸ ನಿರ್ವಹಣೆ ಮಾಡುವಾಗ ಕೊಟ್ಟಿದ್ದ ಚೆಕ್ ನ್ನು ತೆಗೆದುಕೊಂಡು ಹೋಗಿರುತತೇನೆ ಅಂದರೆ ಸರಿಯಲ್ಲ.

ಅದೇ ಚೆಕ್ ನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ ಅಂದರೆ ಸರಿಯಲ್ಲ. ನಿಪಿಃ 1 ರಲ್ಲಿರುವ ಬರವಣಿಗೆ ಮತ್ತು ಸಹಿ ಆರೋಪಿಯದ್ದಲ್ಲ ಅಂದರೆ ಸರಿಯಲ್ಲ. ನಿಪಿಃ 3 ರ ನೋಟಿಸ್ ಆರೋಪಿಗೆ ತಲುಪಿಲ್ಲ ಅಂದರೆ ಸರಿಯಲ್ಲ. ನಿಪಿಃ 5 ರಲ್ಲಿರುವ ಸಹಿ ಆರೋಪಿಯದ್ದಲ್ಲ ಅಂದರೆ ಸರಿಯಲ್ಲ. ನಾನು ಹೋಟೆಲ್ ಉದ್ಯಮದಲ್ಲಿ ಯಾವುದೇ ಅನುಭವ ಇಲ್ಲದೇ, ಆರೋಪಿ ನನ್ನೊಂದಿಗೆ ಹೋಟೆಲ್ ನಡೆಸಲು ಗುತ್ತಿಗೆ ವ್ಯವಹಾರ ಮಾಡಿಕೊಂಡಿದ್ದ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿ ಯಾವುದೇ ಕರಾರು ಪತ್ರ ಬರೆದುಕೊಟ್ಟಿಲ್ಲ ಅಂದರೆ ಸರಿಯಲ್ಲ. ರೂ. 5,30,000/- ಗಳನ್ನು ಆರೋಪಿಗೆ ಕೊಡಲು ನನಗೆ ಆರ್ಥಿಕ ಶಕ್ತಿ ಇರುವುದಿಲ್ಲ ಅಂದರೆ ಸರಿಯಲ್ಲ. ಆರೋಪಿಗೂ ಮತ್ತು ನನಗೂ ಮಾಲೀಕ ಮತ್ತು ನೌಕರನ ಸಂಬಂಧ ಇತ್ತು ಹೊರತಾಗಿ ಯಾವುದೇ ಕರಾರಿನ ಅಡಿಯಲ್ಲಿ ಗುತ್ತಿಗೆ ವ್ಯವಹಾರ ಆಗಿರಲಿಲ್ಲ ಅಂದರೆ ಸರಿಯಲ್ಲ. ನಾನು ಯಾವುದೇ ಹಣವನ್ನು ಆರೋಪಿಗೆ ಕೊಟ್ಟಿರಲಿಲ್ಲ ಮತ್ತು ಅದರ ಮರು ಪಾವತಿಗಾಗಿ ಆರೋಪಿ ನನಗೆ ಚೆಕ್ ನೀಡಿರಲಿಲ್ಲ ಅಂದರೆ ಸರಿಯಲ್ಲ. ಕಾನೂನುಬದ್ಧವಾಗಿ ವಸೂಲಿ ಮಾಡುವಂತಹ ಸಾಲದ ಹಣ ಅಲ್ಲ ಅಂದರೆ ಸರಿಯಲ್ಲ. ನನಗೆ 2 ತಿಂಗಳ ಸಂಬಳ ಕೊಡದೇ ಹೋಟೆಲ್ ನಿಂದ ಹೊರಗೆ ಹಾಕಿದ್ದ ದ್ವೇಷದಿಂದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.